ಜೆಎಸ್‌ಎಸ್ ಮಹಾವಿದ್ಯಾಪೀಠ
**ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜು**
(ಸ್ವಾಯತ್ತ)
**ಬಿ.ಎನ್. ರಸ್ತೆ, ಮೈಸೂರು – 570 025**
ಪ್ರಚ್ಛನ್ನ ಉತ್ಕೃಷ್ಟತಾ ಕಾಲೇಜು ಎಂದು ಯುಜಿಸಿಯಿಂದ ಗುರುತಿಸಲ್ಪಟ್ಟಿದೆ
(ಮೈಸೂರು ವಿಶ್ವವಿದ್ಯಾನಿಲಯದಿಂದ ಸ್ವಾಯತ್ತತೆ ಪಡೆದಿದೆ * ನ್ಯಾಕ್‌ನಿಂದ 'ಎ' ದರ್ಜೆ ಮಾನ್ಯತೆ ಪಡೆದಿದೆ)
Ph: 0821-2548236 & 2548380. FAX: 0821-2548238 E-mail: jssautonomous@gmail.com Website: JSSCACS.edu.in

ದಿನಾಂಕ: 04.04.2018

## ಪ್ರಕಟಣೆ ಕೃಪೆಗಾಗಿ

## ಪಠ್ಯದ ಜೊತೆಗೆ ಲಲಿತ ಕಲೆಗಳು ಅತ್ಯವಶ್ಯ

– **ಡಾ. ಪದ್ಮಾವತಿ ನರಸಿಂಹನ್**

ಮೈಸೂರು–04: ನಗರದ ಬಿ.ಎನ್. ರಸ್ತೆಯ ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜಿನಲ್ಲಿ ಸಾಂಸ್ಕೃತಿಕ ಮತ್ತು ಕ್ರೀಡಾ ವೇದಿಕೆಗಳ ಸಮಾರೋಪ ಹಾಗೂ ಪ್ರತಿಭಾ ವಾರ್ಷಿಕ ಸಂಚಿಕೆ ಬಿಡುಗಡೆ ಸಮಾರಂಭವನ್ನು ಏರ್ಪಡಿಸಲಾಗಿತ್ತು.

ಖ್ಯಾತ ಸಂಗೀತಗಾರರಾದ ಡಾ. ಪದ್ಮಾವತಿ ನರಸಿಂಹನ್ ಅವರು "ಪ್ರತಿಭಾ" ವಾರ್ಷಿಕ ಸಂಚಿಕೆಯನ್ನು ಬಿಡುಗಡೆ ಮಾಡಿ, ಸಮಾರೋಪ ಭಾಷಣದಲ್ಲಿ 'ಕಲೆ ಮತ್ತು ಸಾಹಿತ್ಯ ಜೀವನದಲ್ಲಿ ಬಹಳ ಮುಖ್ಯ. ಗಣಪತಿ ಮತ್ತು ಸರಸ್ವತಿ ವಿದ್ಯಾಲಯದ ಅದಿದೇವತೆಗಳು. ಗಣಪತಿಯ ದೊಡ್ಡ ಕಿವಿ ಮತ್ತು ಚಿಕ್ಕ ಬಾಯಿ ಹೆಚ್ಚು ಕೇಳಿಸಿಕೊಳ್ಳುವ ಮತ್ತು ಕಡಿಮೆ ಮಾತನಾಡುವುದಕ್ಕೆ ಪ್ರತೀಕವಾಗಿವೆ. ಸರಸ್ವತಿ ಜ್ಞಾನದ ಅದಿದೇವತೆ ಮತ್ತು ಸ್ಥಿರತೆಯ ಪ್ರತೀಕ. ಲಲಿತ ಕಲೆಗಳು ಏಕತಾನತೆಯನ್ನು ಮುರಿಯಲು ಮತ್ತು ಚೈತನ್ಯವನ್ನು ಪಡೆಯಲು ಅವಶ್ಯಕವಾಗಿವೆ' ಎಂದು ತಿಳಿಸಿದರು.

ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಅಂತಾರಾಷ್ಟ್ರೀಯ ಜಿಮ್ನ್ಯಾಸ್ಟಿಕ್ ತರಬೇತುದಾರರಾದ ಶ್ರೀ ಅರುಣ್‌ಕುಮಾರ್ ಹೆಚ್ ಪಾಟೀಲ್‌ರವರು ಕ್ರೀಡೆಗಳ ಮಹತ್ವವನ್ನು ವಿದ್ಯಾರ್ಥಿಗಳಿಗೆ ವಿವರಿಸಿದರು. 'ಕ್ರೀಡೆಯು ವೇಗ, ಸಹಿಷ್ಣುತೆ, ಸಮನ್ವಯತೆ, ಧೈರ್ಯ ಮತ್ತು ಕ್ರೀಡಾ ಮನೋಭಾವವನ್ನು ಹೆಚ್ಚಿಸುತ್ತದೆ. ಹಲವಾರು ಕ್ರೀಡೆಗಳಲ್ಲಿ ತೊಡಗಿಸಿಕೊಳ್ಳುವುದರ ಬದಲು, ಒಂದು ಕ್ರೀಡೆಯಲ್ಲಿ ಅತಿಹೆಚ್ಚು ಶ್ರಮಿಸಿದರೆ ಉನ್ನತ ಸ್ಥಾನಕ್ಕೆ ಏರಬಹುದು. ಒಬ್ಬ ಕ್ರೀಡಾಪಟುವಿಗೆ ಶಿಸ್ತು ಮತ್ತು ಅರ್ಪಣಾ ಮನೋಭಾವ ಬಹಳ ಮುಖ್ಯ' ಎಂದು ತಿಳಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದ ಕಾಲೇಜಿನ ಮುಖ್ಯಕಾರ್ಯನಿರ್ವಾಹಕರಾದ ಪ್ರೊ ಬಿ.ವಿ. ಸಾಂಬಶಿವಯ್ಯನವರು ಮಾತನಾಡಿ 'ವಿದ್ಯಾರ್ಥಿಗಳಿಗೆ ವ್ಯಕ್ತಿತ್ವ ವಿಕಸನ ಹಾಗೂ ಸೃಜನಶೀಲತೆಗೆ ಪಠ್ಯೇತರ ಚಟುವಟಿಕೆಗಳಲ್ಲಿ ಭಾಗವಹಿಸುವುದು ಬಹಳ ಮುಖ್ಯ. ಸೋಲು ಗೆಲುವನ್ನು ಸಮನಾಗಿ ಸ್ವೀಕರಿಸಿ ಮೌಲ್ಯಯುತ ಬದುಕನ್ನು ನಡೆಸಿ' ಎಂದು ತಿಳಿಸಿದರು.

2017–18 ನೇ ಸಾಲಿನ ಸಾಂಸ್ಕೃತಿಕ ಹಾಗೂ ಕ್ರೀಡಾ ಸ್ಪರ್ಧೆಗಳಲ್ಲಿ ವಿಜೇತರಾದವರಿಗೆ ಬಹುಮಾನಗಳನ್ನು ವಿತರಿಸಲಾಯಿತು.

ಪ್ರಾಂಶುಪಾಲರಾದ ಪ್ರೊ. ಎಂ. ಮಹದೇವಪ್ಪನವರು, ಸಾಂಸ್ಕೃತಿಕ ವೇದಿಕೆಯ ಸಂಚಾಲಕರಾದ ಪ್ರೊ. ಎಸ್.ಬಿ. ನಾಗರಾಜಮೂರ್ತಿ, ಕ್ರೀಡಾ ವೇದಿಕೆ ಸಂಚಾಲಕರಾದ ಶ್ರೀ ಎಂ. ಕಾರ್ತಿಕ್ ಮತ್ತು ವಾರ್ಷಿಕ ಸಂಚಿಕೆ ಸಂಪಾದಕರಾದ ಡಾ. ಎಂ. ಸಿ ಸರೋಜಮ್ಮಣ್ಣಿ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ದ್ವಿತೀಯ ಬಿಕಾಂ ವಿದ್ಯಾರ್ಥಿ ಜಿ. ಮಹದೇವಪ್ರಸಾದ್ ಪ್ರಾರ್ಥಿಸಿದರು. ತೃತೀಯ ಬಿಎ ವಿದ್ಯಾರ್ಥಿನಿ ಕು. ರಾಜೇಶ್ವರಿ ಸ್ವಾಗತಿಸಿದರು. ತೃತೀಯ ಬಿಕಾಂ ವಿದ್ಯಾರ್ಥಿನಿ ಕು. ರೋಜಾ ವಂದಿಸಿದರು. ದ್ವಿತೀಯ ಬಿಎಸ್ಸಿ ವಿದ್ಯಾರ್ಥಿ ಅಮೋದ್ ಆರ್. ಭಟ್ ನಿರೂಪಿಸಿದರು.

ಪ್ರಾಂಶುಪಾಲರು

ಗೆ
ಸಂಪಾದಕರು

– – – – – – – – – –

ಮೈಸೂರು